## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಬಾದ

**CC.No 16/2025**

**CW : 01 PW: 01**

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 03.03.2026**

| | |
|---|---|
| ಹೆಸರು | : ಭಾರತಿಬಾಯಿ ಪವಾರ |
| ಗಂಡನ ಹೆಸರು | : ದತ್ತುರಾವ |
| ವಯಸ್ಸು | : 38 |
| ಉದ್ಯೋಗ | : ಮನೆಗೆಲಸ |
| ವಾಸಸ್ಥಳ | : ಕಲಬುರಗಿ |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ಚಾಸಾ-4 ರಿಂದ 10 ರವರ ಪರಿಚಯ ಇರುತ್ತದೆ. ಆರೋಪಿತನ ಪರಿಚಯವು ನನಗೆ ಇರುವುದಿಲ್ಲ. ಮೃತ ಯಮುನಾಬಾಯಿ ನನ್ನ ತಾಯಿ. ಅವರು ಅಪಘಾತದಲ್ಲಿ ತೀರಿ ಹೋಗಿರುತ್ತಾರೆ.

ಯಾವ ಯಾವ ವಾಹಗಳ ಮಧ್ಯೆ ಹಾಗೂ ಯಾವ ದಿನಾಂಕ, ಸಮಯ ಮತ್ತು ಜಾಗೆಯಲ್ಲಿ ಆಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಈ ಅಪಘಾತವು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ಅಪಘಾತವು ಯಾರಿಂದ ಆಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಈ ಪ್ರಕರಣದಲ್ಲಿ ನಾನು ಪೋಲೀಸರ ಮುಂದೆ ಯಾವುದೇ ದೂರು ನೀಡಿರುವುದಿಲ್ಲ.

ಈ ಹಂತದಲ್ಲಿ ಸಾಕ್ಷಿಗೆ ಕಡತದಲ್ಲಿರುವ ಒಂದು ದಾಖಲೆಯನ್ನು ತೋರಿಸಿದ್ದು, ಅದು ಫಿರ್ಯಾದಿಯಾಗಿದ್ದು ಅದನ್ನು ನಿ.ಪಿ.1 ಎಂದು ನಿಶಾನೆಗೊಳಿಸಲಾಯಿತು, ಸಾಕ್ಷಿದಾರರ ನಿ.ಪಿ.1 (ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಕಡತದಲ್ಲಿರುವ ಒಂದು ಭಾವಚಿತ್ರವನ್ನು ತೋರಿಸಿದ್ದು, ಅದನ್ನು ನೋಡಿ ಸಾಕ್ಷಿಯು ಗುರುತಿಸಿದ್ದು, ಅದನ್ನು ನಿ.ಪಿ.2 ಎಂದು ನಿಶಾನೆಗೊಳಿಸಲಾಯಿತು, ನಿ.ಪಿ.2 ನ್ನು ಯಾವ ಕಾರಣಕ್ಕೆ ತೆಗೆದಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ.

ನಿ.ಪಿ.1 ರ ಮೇಲೆ ಯಾವ ಕಾರಣಕ್ಕಾಗಿ ಸಹಿ ಹಾಕಿರುತ್ತೇನೆ ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ನಿ.ಪಿ.1 ಮತ್ತು 2 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು ಪೋಲೀಸರಿಗೆ ಯಾವುದೇ ದೂರನ್ನು ನೀಡಿರುವುದಿಲ್ಲ ಹಾಗೂ ಹೇಳಿಕೆ ಮತ್ತು ಪುನರ ಹೇಳಿಕೆ ನೀಡಿರುವುದಿಲ್ಲ. ಇದನ್ನು ಹೊರತುಪಡಿಸಿ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ದಿ: 04/10/2024 ರಂದು ಮುಂಜಾನೆ 11 ಗಂಟೆ ಸುಮಾರಿಗೆ ನಾನು ಮೃತ ನನ್ನ ತಾಯಿ ಭಂಕೂರು ಬ್ಯಾಂಕಿಗೆ ಹೋಗಲು ಅಟೋ ಸ್ಟ್ಯಾಂಡಿಗೆ ಬಂದಿರುತ್ತೇವೆ ಎಂದರೆ ಸರಿಯಲ್ಲ. ಅಲ್ಲಿ ನಮ್ಮೂರಿಗೆ ಹೋಗುವ ಸಲುವಾಗಿ ಟಂಟಂ ನಿಂತಿತ್ತು ಎಂದರೆ ಸರಿಯಲ್ಲ. ಸದರಿ ಟಂಟಂನಲ್ಲಿ ನಾನು, ಮೃತ ನನ್ನ ತಾಯಿ ಯಮುನಾಬಾಯಿ ನಮ್ಮೂರಿನ ಚಾಸಾ-9 ಮತ್ತು 10 ರವರು ಕುಳಿರುಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಸದರಿ ಟಂಟಂ ನಂ ಕೆ.ಎ-32 ಬಿ-1329 ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಟಂಟಂನಲ್ಲಿ ಕುಳಿತುಕೊಂಡು ಮುತ್ತಗಾ ಸಮೀಪಕ್ಕೆ ಹೋದಾಗ ಸಮಯ 3 ಗಂಟೆ ಆಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಎದುರುಗಡೆಯಿಂದ ಒಮಿನಿ ಕಾರ ಚಾಲಕನು ತನ್ನ ಕಾರನ್ನ ಅತೀ ವೇಗ ಮತ್ತು ಅಲಕ್ಷತನದಿಂದ ಚಲಾಯಿಸಿಕೊಂಡು ಬಂದಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಟಂಟಂನಲ್ಲಿ ಕುಳಿತ ನಮ್ಮನ್ನು ಡಿಕ್ಕಿಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಟಂಟಂ ಪಲ್ಟಿಯಾಗಿ ನಾವೆಲ್ಲರೂ ರೋಡಿನ ಮೇಲೆ ಬಿದ್ದಿರುತ್ತೇವೆ ಎಂದರೆ ಸರಿಯಲ್ಲ.

ಸದರಿ ಅಪಘಾತದಿಂದ ಮೃತ ನನ್ನ ತಾಯಿಗೆ ಬಲಗೈ ಕಟ್ಟಾಗಿ ಜೋತಾಡುತ್ತಿತ್ತು ಎಂದರೆ ಸರಿಯಲ್ಲ. ಚಾಸಾ-9 ಮತ್ತು 10 ರವರಿಗೆ ಸೊಂಟಕ್ಕೆ ಕಣ್ಣಿನ ಹತ್ತಿರ ರಕ್ತಗಾಯಗಳು ಆಗಿರುತ್ತವೆ ಎಂದರೆ ಸರಿಯಲ್ಲ. ನಾನು ಸದರಿ ಒಮಿನಿ ಕಾರ ನಂ. ನೋಡಲಾಗಿ ಅದರ ನಂ.ಕೆ.ಎ-32, ಎಮ್-9526 ಇರುತ್ತದೆ ಎಂದರೆ ಸರಿಯಲ್ಲ. ಸದರಿ ಚಾಲಕನ ಹೆಸರು ಮಲ್ಲೇಶಿ ಅಂತ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಕಾರನಿನಲ್ಲಿ ಗಾಯಾಳುಗಳನ್ನು ಉಪಚಾರ ಕುರಿತು ಆಸ್ಪತ್ರೆಗೆ ಸೇರಿಕೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನನಗೂ ಸಹ ಸಣ್ಣ ಪುಟ್ಟ ಗಾಯಗಳಾಗಿರುತ್ತವೆ ನಾನು ಆಸ್ಪತ್ರೆಗೆ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಕುರಿತು ಟಂಟಂ ವಾಹನದ ಚಾಲಕನ ಮೇಲೆ ಕಾನೂನು ರೀತಿಯ ಕ್ರಮ ಜರುಗಿಸಬೇಕೆಂದು ಪೋಲೀಸರಿಗೆ ನಿ.ಪಿ.1 ರಂತೆ ಪೋಲೀಸರಿಗೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.2 ರಂತೆ ಪಂಚನಾಮೆ ಸಮಯದಲ್ಲಿ ಸ್ಥಳವನ್ನು ತೋರಿಸಿರುತ್ತೇನೆ ಎಂದರೆ ಸರಿಯಲ್ಲ.

ದಿ: 17/10/2024 ರಂದು ನನ್ನ ತಾಯಿ ಮೃತಪಟ್ಟ ಬಗ್ಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಈಗ ಓದಿ ಹೇಳಲಾದ ಹೇಳಿಕೆಗಳನ್ನು ಸಾಕ್ಷಿಯು ಅಲ್ಲಗಳೆದ್ದು, ಅವುಗಳನ್ನು ನಿ.ಪಿ.3 ಎಂದು ನಿಶಾನೆಗೊಳಿಸಲಾಯಿತು. ನಿ.ಪಿ.1 ರಿಂದ 3 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದ್ದರೂ ಸಹ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಹಿರಿಯರ ಮಧ್ಯಸ್ಥಿಕೆಯಿಂದ ನಾನು ಈ ಪ್ರಕರಣವನ್ನು ಮುಂದುವರೆಸಲು ಇಷ್ಟಪಡುವುದಿಲ್ಲ, ಆರೋಪಿತರ ನಡುವೆ ರಾಜಿ ಮಾಡಿಕೊಂಡಿರುವ ಕಾರಣ ನಾನು ಇದನ್ನು ಇಲ್ಲೇ ಇತ್ಯರ್ಥ ಪಡಿಸಿಕೊಳ್ಳುವುದಾಗಿ ಸಾಕ್ಷಿದಾರರು ಸ್ವ ಇಚ್ಛೆಯಾಗಿ ನುಡಿದಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ**

ಪಾಟೀ ಸವಾಲು ಇರುವುದಿಲ್ಲ.

**ಮರುವಿಚಾರಣೆ:** ಇರುವುದಿಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**Sd/-**

**ಪ್ರ.ದ.ನ್ಯಾ.ದಂ.ಗಳು, ಶಹಾಬಾದ**